**ದಿನಾಂಕ:10-11-2023 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯವಿಚಾರಣೆ: ಪ್ರತಿವಾದಿ ಪರ ಶ್ರೀ.ಸಿ ಪಿ ಜೆ ವಕೀಲರಿಂದ**

ನನ್ನ ಮುಖ್ಯವಿಚಾರಣೆಯ ಸಾಕ್ಷಿಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ . ಅದರಲ್ಲಿನ ಸಂಗತಿಗಳೆಲ್ಲ ಸತ್ಯವಿದ್ದು, ಅವುಗಳನ್ನು ನಾನೇ ಹೇಳಿ ಬರೆಯಿಸಿರುತ್ತೇನೆ. ಪ್ರಮಾಣ ಪತ್ರವನ್ನು ನನ್ನ ಮುಖ್ಯವಿಚಾರಣೆಯ ಸಾಕ್ಷ್ಯವನ್ನಾಗಿ ಪರಿಗಣಿಸಬೇಕೆಂದು ಪ್ರಾರ್ಥಿಸುತ್ತೇನೆ.

ದಾವಾದಾಸ್ತಿಗೆ ಸಂಬಂದಪಟ್ಟಂತೆ ನಮ್ಮ ಕುಟುಂಬದಲ್ಲಿ ದಿಃ04-10-2000 ರಂದು ನೊಂದಾಯಿತ ವಾಟ್ನಿ ಪತ್ರದ ಮೂಲಕ ವಾಟ್ನಿಯಾಗಿದ್ದು, ಅದರದ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು, ಅದು ನಿಡಿ 1 ಎಂದು ಗುರುತಿಸಲಾಯಿತು. ಕೊಪ್ಪರಸಿಕೊಪ್ಪ ಗ್ರಾಮದ ಆಸ್ತಿಗೆ ಡ ನಂಬರ 751 ಅನ್ನು ಹಾಜರುಪಡಿಸಿದ್ದು, ಅದು ನಿಡಿ 2 ಎಂದು ಗುರುತಿಸಲಾಯಿತು. ಕೊಪ್ಪರಸಿಕೊಪ್ಪ ಗ್ರಾಮದ ಆಸ್ತಿಗೆ ಡ ನಂಬರ 727 ಅನ್ನು ಹಾಜರುಪಡಿಸಿದ್ದು, ಅದು ನಿಡಿ 3 ಎಂದು ಗುರುತಿಸಲಾಯಿತು. ಕೊಪ್ಪರಸಿಕೊಪ್ಪ ಗ್ರಾಮದ ಆಸ್ತಿಗೆ ಡ ನಂಬರ 1364 ಅನ್ನು ಹಾಜರುಪಡಿಸಿದ್ದು, ಅದು ನಿಡಿ 4 ಎಂದು ಗುರುತಿಸಲಾಯಿತು. ನಮ್ಮ ಕುಟುಂಬದ ವಂಶವೃಕ್ಷ ಅನ್ನು ಹಾಜರುಪಡಿಸಿದ್ದು, ಅದು ನಿಡಿ 5 ಎಂದು ಗುರುತಿಸಲಾಯಿತು. ನಮ್ಮ ಕುಟುಂಬದ ವಿಪಿಸಿ ಆಸ್ತಿಗಳಿಗೆ ಸಂಬಂದಪಟ್ಟ ಗ್ರಾಮ ಪಂಚಾಯಿುತಿ ಕೊಪ್ಪರಸಿಕೊಪ್ಪ ರವರ ಸಭಾ ನಡುವಳಿವಿಯನ್ನು ಹಾಜರುಪಡಿಸಿದ್ದು, ಅದು ನಿಡಿ 6 ಎಂದು ಗುರುತಿಸಲಾಯಿತು. ಕೊಪ್ಪರಸಿಕೊಪ್ಪ ಗ್ರಾಮ ಪಂಚಾಯತಿಯವರು ನೀಡಿದ ವಿಪಿಸಿ ಆಸ್ತಿಗೆ ಸಂಬಂದಪಟ್ಟಂತೆ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದು ನಿಡಿ 7 ಎಂದು ಗುರುತಿಸಲಾಯಿತು. ಕೊಪ್ಪರಸಿಕೊಪ್ಪ ಗ್ರಾಮ ಪಂಚಾಯತಿಯವರು ನೀಡಿದ ಮತ್ತೊಂದು ದಿಃ06-06-2019 ರ ಠರಾವನ್ನು ಹಾಜರುಪಡಿಸಿದ್ದು, ಅದು ನಿಡಿ 8 ಎಂದು ಗುಬುರುತಿಸಲಾಯಿತು.

**(ವಾದಿ ಮತ್ತು ವಾದಿ ಪರ ವಕೀಲರು ಯಾರೂ ಸಹ ಪ್ರತಿನಿದಿಸಿರುವುದಿಲ್ಲ ಆದರೂ ಸಹ ಮತ್ತೊಂದು ಕಾಲಾವಕಾಶ ನೀಡುವುದು ಸೂಕ್ತ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಹಾನಗಲ್

ಸಾಕ್ಷಿದಾರರ ಸಹಿ